ಲೇಖನ 04

# ಸರೋವರದ ಮಡಿಲಲಿ ಅರಳಿದ ಜಲಸಿರಿ ಸತ್ಯನಾರಾಯಣ ಪೂಜಾಪುಷ್ಪ ಕಲ್ಹಾರ

ಪ್ರಕೃತಿಯ ಸೌಂದರ್ಯವು ಕೇವಲ ಭೂಮಿಯ ಮೇಲಷ್ಟೆ ಅಲ್ಲ ನೀರಿನ ಅಂತರಾಳದಲ್ಲಿಯೂ ಅಡಗಿದೆ. ವರುಣ ದೇವನ ಕೃಪೆಯಿಂದ ತುಂಬಿ ತುಳುಕುವ ಕೆರೆಕುಂಟೆಗಳು ಕೇವಲ ಜಲರಾಶಿಯಲ್ಲ, ಅವು ಪ್ರಕೃತಿಯ ಅದ್ಭುತ ಸಸ್ಯಲೋಕದ ಆಶ್ರಯತಾಣಗಳು. ನೀರಿನ ಮೇಲೆ ತೇಲುವ ಎಲೆಗಳು ಮತ್ತು ಅವುಗಳ ನಡುವೆ ಇಣುಕುವ ವರ್ಣರಂಜಿತ ಜಲಪುಷ್ಪಗಳು ಭೂಮಿಗೆ ಒಲಿದ ದಿವ್ಯ ಆಭರಣಗಳಿಂತಿವೆ. ಈ ಜಲ ಸಸ್ಯಗಳು ನೀರಿನ ಸೌಂದರ್ಯ ಹೆಚ್ಚಿಸುವದಲ್ಲದೇ ಜಲಚರ ಪ್ರಾಣಿಗಳಿಗೆ ಆಶ್ರಯ ಮತ್ತು ಆಹಾರವನ್ನು ನೀಡುವ ಮೂಲಕ ಪರಿಸರ ವ್ಯವಸ್ಥೆಯ ಸಮತೋಲನವನ್ನು ಕಾಪಾಡುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

ಭೂಮಿಯ ಮೇಲಿನ ಜೀವವೈವಿಧ್ಯತೆಯಂತೆ ಜಲ ವೈವಿಧ್ಯತೆ ವ್ಯವಸ್ಥೆಯೂ ಪ್ರಮುಖವಾಗಿದೆ. ಸರೋವರದ ಮಡಿಲಲ್ಲಿ ಅರಳಿದ ಜಲಸಿರಿ ನಿಸರ್ಗ ಕಾವ್ಯ ಕಲ್ಹಾರ. ನೀರಿನ ಒಡಲಲ್ಲಿ ಮೌನವಾಗಿ ಅರಳಿ ಇಡೀ ಸರೋವರಕ್ಕೆ ಶ್ವೇತ ವರ್ಣದ ಲೇಪನ ಮಾಡುವ ಕಲ್ಹಾರ ಇದೊಂದು ಪ್ರಕೃತಿಯ ಅದ್ಭುತ ಸೃಷ್ಟಿ.ಮುಂಜಾನೆಯ ಮಂಜಿನ ಹನಿಗಳು ಇದರ ದಳಗಳ ಮೇಲೆ ಹೊಳೆಯುವ ದೃಶ್ಯ, ಯಾವುದೇ ಕಲಾಕಾರನ ಕಲ್ಪನೆಗೂ ಮೀರಿದ ಕಲಾಸೌಂದರ್ಯವದು. ನಮಿಸುವೆ ಕರವೀರಪುರನಿಲಯೇ ಪೂಜಿಪೆನು ನಿನ್ನ, ಮಲ್ಲಿಗೆ ಕೇದಿಗೆ ಕಲ್ಹಾರ ಪುಷ್ಪ ತಂದು ಎಲ್ಲ ಸಮರ್ಪಿಸುವೆ, ಪೂಜಿಪೆನು ನಿನ್ನ ನಡೆದು ಬಾರಮ್ಮ ತಾಯೇ" ಕೊಲ್ಹಾಪುರ ಮಹಾಲಕ್ಷ್ಮೀ ಕುರಿತು ಕವಿಯೋರ್ವ ಬರೆದ ಸ್ತುತಿಯಿದು. ಅಶುದ್ಧವಾದ ಕೆಸರಿನಲ್ಲಿ ಜನ್ಮ ತಳೆದರೂ ತನ್ನ ಪಾವಿತ್ರ್ಯತೆಯನ್ನು ಕಿಂಚಿತ್ತೂ ಬಿಟ್ಟುಕೊಡದ ಅಚಲತೆ ಕಲ್ಹಾರ ಪುಷ್ಪದ್ದು.. ಜೀವನದ ಸವಾಲುಗಳ ನಡುವೆಯೂ ಹೇಗೆ ಪರಿಶುದ್ಧವಾಗಿ ಬದುಕಬೇಕೆಂಬುದಕ್ಕೆ ಈ ಶ್ವೇತ ಕಮಲ ಒಂದು ಜೀವಂತ ಪಾಠವಾಗಿದೆ.

ದೇವತೆಗಳ ಆಸನವಾಗಿ, ಜ್ಞಾನ ದೇವತೆ ಸರಸ್ವತಿಯ ಪ್ರಿಯ ಪುಷ್ಪವಾಗಿ ಕಂಗೊಳಿಸುವ ಕಲ್ಹಾರ ಮನುಷ್ಯನ ಆಧ್ಯಾತ್ಮಿಕ ಪಯಣದ ಸಂಕೇತ. ಧಾರ್ಮಿಕ ಪ್ರಾಮುಖ್ಯತೆ ಪಡೆದಿರುವ ಕಲ್ಹಾರ ಹಿಂದೂ ಧರ್ಮದ ಅನೇಕ ಪೂಜೆಪುನಸ್ಕಾರಗಳಲ್ಲಿ ವಿವಿಧ ವೃತ ನೇಮಗಳಲ್ಲಿ ಅರ್ಚನೆಯ ಪುಷ್ಪವೆಂಬ ವಿಶೇಷ ಸ್ಥಾನವಿದೆ.

ಸಸ್ಯ ಶಾಸ್ತ್ರೀಯ ವನ ನಿರ್ಮಾಣದಲ್ಲೂ ವೃಕ್ಷಾರೋಪಣಗೊಳ್ಳುವ ಜಲಜ ಕುಸುಮ ಸತ್ಯನಾರಾಯಣ ಪೂಜಾಪುಷ್ಪ ಕಲ್ಹಾರ. ಕಲ್ಹಾರ ಪುಷ್ಪಗಳಿಗೆ ಭಾರತದ ಉಪಖಂಡ, ಆಗ್ನೇಯ ಏಷ್ಯಾ, ಆಫ್ರಿಕಾ ದೇಶವೇ ತವರೂರು. ಆಳವಿಲ್ಲದ, ನಿಶ್ಚಲನೀರು, ಜೌಗು ಪ್ರದೇಶ, ಕೊಳಗಳಲ್ಲಿ ಬೆಳೆಯುವ ಕಲ್ಹಾರದ ನಾಮಧೇಯಗಳನ್ನು ದರ್ಶನ ಮಾಡೋಣ.

ನಿಂಫೇಯೇಸಿ ಸಸ್ಯ ಕುಟುಂಬದ ಸದಸ್ಯ ನಿಂಫಿಯಾ ಎಂಬುದು ಗ್ರೀಕ್ ಪುರಾಣದಲ್ಲಿ ಉಲ್ಲೇಖವಾಗಿರುವ ನೀರಿನ ದೇವತೆಯ ಹೆಸರು. ಈ ದೇವತೆಯ ನೆನಪಿಗಾಗಿ ನೀರಿನಲ್ಲಿ ಬೆಳೆಯುವ ಕಮಲದ ಕುಲಕ್ಕೆ ಜಾತಿಸೂಚಕವಾಗಿ ನಾಮಕರಣ ಮಾಡಲಾಗಿದೆ. ಇದರ ವೈಜ್ಞಾನಿಕ ಹೆಸರು ನಿಂಫಿಯಾ ಅಲ್ಬಾ. ಹಿಂದಿಯಲ್ಲಿ ಕುಮುದಿನಿ, ತೆಲುಗಿನಲ್ಲಿ ಕೌವಾ ಪೂವ್ವು, ಮಲಯಾಳಿಯಲ್ಲಿ ಕಾಮೋದ್, ಇಂಗ್ಲಿಷಿನಲ್ಲಿ ವೈಟ್ ವಾಟರ್ ಲಿಲ್ಲಿ, ಕನ್ನಡದಲ್ಲಿ ಬಿಳಿ ಕಮಲ, ಸಂಸ್ಕೃತಭಾಷೆಯಲ್ಲಿ ಬಿಳಿಯ ಬಣ್ಣ ಹೊಂದಿರುವರಿಂದ ಶ್ವೇತ ಕುವಲಯಾ, ಶ್ವೇತ ಜಲಜ, ನೀರಿನಲ್ಲಿ ಹುಟ್ಟುವದರಿಂದ ಕುಮುದ, ಕಲ್ಹಾರ, ಅಂಬೋದ್, ಅಬ್ಜ, ಅಂಬುಜ, ಜಲೇರುಹ, ಸೋಮಪ್ರಿಯವೆಂದು, ಕೈರವ, ಪಂಕಜ, ಚಂದ್ರಕಾಂತ, ಶಶಿಪ್ರಿಯ ಕಲ್ಹಾರ ನಾಮಾವಳಿಗಳು.

ಬೌದ್ಧ ಧರ್ಮದಲ್ಲಿ ಮತ್ತು ಹಿಂದೂ ಸಂಪ್ರದಾಯಗಳಲ್ಲಿ ಹಬ್ಬ ಹರಿದಿನಗಳಲ್ಲಿ, ವೃತ ನೇಮಗಳಲ್ಲಿ ವಿಶೇಷವಾಗಿ ಬಳಕೆಯಾಗುವ ಜಲಪುಷ್ಪ ಕಲ್ಹಾರವನ್ನು ತುಲಸಿ ವಿವಾಹದಲ್ಲಿ ಓಂ ಭೂಮ್ಯೈ ನಮ: ಕಲ್ಹಾರ ಪುಷ್ಪಂ ಸಮರ್ಪಯಾಮಿ, ಸಂಕಷ್ಟ ಚತುರ್ಥೀಯಲ್ಲಿ ಓಂ ಏಕದಂತಾಯ ನಮ: ಕಲ್ಹಾರ ಪುಷ್ಪಂ ಸಮರ್ಪಯಾಮಿ, ಶ್ರೀ ಹರಿತಾಳಕ ಗೌರಿವೃತದಲ್ಲಿ ಶಶಿಶೇಖರಾಯ ನಮ: ಕಲ್ಹಾರ ಪುಷ್ಪಂ ಸಮರ್ಪಯಾಮಿ, ಮಾರ್ಗಶೀರ್ಷ ಮಹಾಲಕ್ಷ್ಮೀ ವೃತದಲ್ಲಿ ಓಂ ಮಾಯಾಯೈ ನಮ: ಕಲ್ಹಾರ ಪುಷ್ಪಂ ಸಮರ್ಪಯಾಮಿ, ಶ್ರೀ ಸತ್ಯನಾರಾಯಣ ವೃತದಲ್ಲಿ ಓಂ ಸತ್ಯರೂಪಾಯ ನಮ: ಕಲ್ಹಾರ ಪುಷ್ಪಂ ಸಮರ್ಪಯಾಮಿ, ಅನಂತ ಪದ್ಮನಾಬ ವೃತದಲ್ಲಿ ಓಂ ಸಹಸ್ರ ಶಿರಸೇ ನಮ: ಎಂದು, ನೃಸಿಂಹ ಜಯಂತಿಯಲ್ಲಿ ಓಂ ಬ್ರಹ್ಮಣ್ಯಾಯ ನಮಃ ಕಲ್ಹಾರ ಪುಷ್ಪಂ, ನಿತ್ಯ ಸೋಮವಾರ ವೃತದಲ್ಲಿ ಕಪರ್ದಿನೇ ನಮಃ ಕಲ್ಹಾರ ಪುಷ್ಪಂ ಸಮರ್ಪಯಾಮಿ ಎಂದು ಹಾಗೂ ವಾಮನ ಜಯಂತಿಯ ಪುಷ್ಪ ಪೂಜೆಯಲ್ಲಿ ಕಲ್ಹಾರ ಪುಷ್ಪದಿಂದ ಅರ್ಚನೆ ಮಾಡಬೇಕೆಂದು ಧಾರ್ಮಿಕ ಗ್ರಂಥಗಳಲ್ಲಿ ಉಲ್ಲೇಖವಿದೆ.

ಶಾಸ್ತ್ರೀಯ ವನಗಳಾದ ಸಪ್ತಋಷಿ ವನದಲ್ಲಿ ಅತ್ರಿ ಋಷಿ ಪ್ರತಿನಿಧಿಯಾಗಿ ಮತ್ತು ಸರ್ವೌಷಧಿ ವನ, ನೃಸಿಂಹ ವನ ನಿರ್ಮಾಣದಲ್ಲಿ ಕಲ್ಹಾರ ಪುಷ್ಪದ ಗಿಡವನ್ನು ವೃಕ್ಷಾರೋಪಣ ಮಾಡಬೇಕೆಂದು ವನ್ಯಶಾಸ್ತ್ರ ಸಂಹಿತಾದಲ್ಲಿ ಬರೆಯಲಾಗಿದೆ. ಪದ್ಮ ಸಂಹಿತೆ 14 ನೇ ಅಧ್ಯಾಯದಲ್ಲಿ ಉಲ್ಲೇಖಿಸಿದಂತೆ ಪಂಚರಾತ್ರ ನಾರಾಯಣ ಆರಾಧನೆಯಲ್ಲಿ ಚೈತ್ರ ಮಾಸದಲ್ಲಿ ವಸಂತೋತ್ಸವ, ದಮನೋತ್ಸವ ಜೊತೆಯಲ್ಲಿ ಕಲ್ಹಾರೋತ್ಸವ ಎಂಬ ಉತ್ಸವವನ್ನು ಆಚರಿಸುವರು. ಶತ್ರುದಾಳಿ ಭಯ, ಕ್ಷಾಮ ಉಂಟಾದಾಗ ಕಲ್ಹಾರೋತ್ಸವ ಮಾಡುವ ಸಂಪ್ರದಾಯವಿತ್ತೆಂದು ತಿಳಿಸಿದೆ.

ದೀಕ್ಷಾ ಸಮಾರಂಭಗಳಲ್ಲಿ, ದೇವಾಲಯಗಳ ಮತ್ತು ಪ್ರತಿಮೆಗಳ ನಿರ್ಮಾಣ, ಪವಿತ್ರಿಕರಣಗಳಲ್ಲಿ ಕಲ್ಹಾರ ಪುಷ್ಪ ಉಪಯೋಗಿಸುವ ಕುರಿತು ವಿಶ್ವಾಮಿತ್ರ ಸಂಹಿತೆಯಲ್ಲಿ ಉಲ್ಲೇಖಿದಲಾಗಿದೆಯೆಂದು ತಿಳಿಸುತ್ತದೆ. ಜಾತಿದ್ವಯಂ ಕೇತಕೇ ದ್ವೇ ಕಲ್ಹಾರ ಚಂಪಕೋತ್ಪಲೇ ಕುಂದ ಮಂದಾರ ಪುನ್ನಾಗ ಪಾಟಲಾ ನಾಗಚಂಪಕಮ್" ಪೂಜಾ ವಿಧಿಗಳಲ್ಲಿ ಎರಡು ಜಾಜಿ ಹೂವು ಎರಡು ಕೇದಿಗೆ, ಎರಡು ಬಿಳಿ ಕಮಲ(ಕಲ್ಹಾರ) ಮಲ್ಲಿಗೆ, ಸಂಪಿಗೆ, ಮಂದಾರ, ಪುನ್ನಾಗ, ಪಾಟಲಿ ನಾಗಸಂಪಿಗೆ ,

ಪುಷ್ಪವನ್ನು ಬಳಸಬೇಕೆಂದು ಶಾರದಾತಿಲಕ ಗ್ರಂಥದಲ್ಲಿ ಬರೆಯಲಾಗಿದೆ. ಜಾತಿ ಪುಷ್ಪಾಣಿ ಸರ್ವಾಣಿ ಕುಂದಪುಷ್ಪಂ ತಥೈವ ಚ/ ಕಲ್ಹಾರೇ ಶ್ವೇತರಕ್ತೇ ತಥಾಂಬುಜೇ//" ಜಾಜಿ, ಕುಂದ ಮಲ್ಲಿಗೆ, ಕಲ್ಹಾರ, (ಬಿಳಿ ಕಮಲ) ಕೆಂದಾವರೆ ವಿಷ್ಣುವಿಗೆಯ ಇಷ್ಟವಾದ ಪುಷ್ಪಗಳು. ವಾಗ್ಭಟ ಚರಕ ಸಂಹಿತೆ,ಭಾವಪ್ರಕಾಶದ ಪುಷ್ಪ ವರ್ಗದಲ್ಲಿ, ಧನ್ವಂತರಿ ನಿಘಂಟುವಿನ ಕರವೀರಾದಿ ವರ್ಗದಲ್ಲಿ ಸುಶ್ರುತ ಸಂಹಿತೆಯ ಉತ್ಪಲಾದಿ ವರ್ಗದಲ್ಲಿ ಕಲ್ಹಾರ ಪುಷ್ಪದ ಕುರಿತು ಮಾಹಿತಿ ಲಭ್ಯವಿದೆ.

"ಪಯಸ್ಯೋರ್ಧಕೇ ಚ್ಛಾಗೇ ಹ್ರೀವೇರೋತ್ಪಲನಾಗರೈ:/ ಪೇಯಾರಕ್ತಾತೀಸಾರಘ್ನೀಪ್ರಶ್ನಿಪರ್ಣ್ಯಾ ಚ ಸಾಧಿತಾ" ಹ್ರೀವೇರ, ಬಿಳಿಕಮಲ ಗಡ್ಡೆಗಳಿಂದ ಪ್ರಶ್ನಪರ್ಣಿಗಳಿಂದ ಅರ್ಧದಷ್ಟು ನೀರು ಬೆರೆಸಿರುವ ಆಡಿನ ಹಾಲಿನಲ್ಲಿ ತಯಾರಿಸಿದ ಪೇಯವು ರಕ್ತಾತಿಸಾರವನ್ನು ಕಡಿಮೆ ಮಾಡುತ್ತದೆ. "ಪ್ರಪೌಂಡಿರೀಕಂ ಸೂಕ್ಷ್ಮೈಲಾಂ ವಿಡಗ್ವಂ ಬಿಲ್ವಪುತ್ಪಲಮ್/ ಹ್ರಬೇರಮಭಯಂ ವನ್ಯಮ ತ್ವಙ್ಮುಸ್ತಂ ಸಾರಿವಾಂ ಸ್ಥಿರಾಮ್" ಪುಂಡರೀಕ, ಸಣ್ಣ ಏಲಕ್ಕಿ, ವಾಯುವಿಡಂಗ, ಬಿಳಿಕಮಲ, ಹೀಬೇರ ಉಶೀರ, ಮುಸ್ತ ತ್ವಕ್, ಸುಗಂಧಿ ಬೇರು ಇವುಗಳು ಅಣುತೈಲ ತಯಾರಿಕೆಯಲ್ಲಿ ಬಳಕೆಯಾಗುತ್ತದೆ ಎಂದು ಚರಕ ಸಂಹಿತೆಯಲ್ಲಿ ಬರೆಯಲಾಗಿದೆ.

ರಕ್ತದ ಅಸ್ವಸ್ಥತೆ, ಅತಿಸಾರ, ಚರ್ಮರೋಗಗಳು, ನರರೋಗ, ಮೂಗಿನಿಂದ ರಕ್ತಸ್ರಾವ ತೊಂದರೆಗಳಲ್ಲಿ ಉಪಯುಕ್ತ ಮೂಲಿಕೆಯಾಗಿದೆ. ಮುಟ್ಟಿನ ರಕ್ತಸ್ರಾವದಲ್ಲಿ ಬಳಸುವ ದರ್ವ್ಯಾದಿ ಕಷಾಯ, ಮಹಿಳೆ ಮತ್ತು ಪುರುಷರ ಬಂಜೆತನ ನಿವಾರಣೆಯಲ್ಲಿ ಫಲ ಕಲ್ಯಾಣಘೃತ, ರಕ್ತಸ್ರಾವ ಮೂಲವ್ಯಾಧಿಗೆ ಉಪಯೋಗಿಸುವ ಸಮಂಗಾದಿ ಚೂರ್ಣ, ಧೀರ್ಘಕಾಲದ ಜ್ವರಕ್ಕೆ ಚಂದನಾದಿ ಲೇಹ್ಯ, ವಾಂತಿ ತಲೆತಿರುಗುವಿಕೆಯಲ್ಲಿ ಪುಗಖಂಡ ಇವು ಕಲ್ಹಾರಯುಕ್ತ ಆಯುರ್ವೇದಿಯ ಔಷಧಗಳು.

ಭೂಮಿಯ ಮೇಲಿನ ಸಸ್ಯವಾಗಲಿ, ಜಲದೊಳಗಿನ ಸಸ್ಯವಾಗಲಿ ಮನುಕುಲದ ಒಳಿತಿಗಾಗಿ ತಮ್ಮ ಸೇವೆ ಮಾಡುತ್ತಿರುತ್ತವೆ. "ಪತ್ರಂ ಪುಷ್ಪಂ ಫಲಂ ಚೈವ ರಜೋರೇಣೂಸಮಾಗಮಾ:/ ತೋಷಯಂತಿ ಚ ಪಾತಾರಂ ಪ್ರತ್ಯಹಂ ಪ್ರತಿಕರ್ಮಣಿ" ಹಸಿರಾದ ಎಲೆಗಳು, ಸುಂದರವಾದ ಹೂವುಗಳು, ಒಳ್ಳೆಯ ಫಲ, ರಜಸ್ಸು ಮತ್ತು ರೇಣುವಿನ ಕೂಡುವಿಕೆಗಳು ಪ್ರತಿನಿತ್ಯವೂ ಎಲ್ಲ ಕರ್ಮಗಳಲ್ಲಿಯೂ ಸಂರಕ್ಷಕನನ್ನು ಸಂತೋಷಗೊಳಿಸುತ್ತವೆ. ಆದ್ದರಿಂದ ಜಲ ಸಸ್ಯವೆಂದು ನಿರ್ಲಕ್ಷ್ಯ ಬೇಡ ಅವು ನಮಗೆ ಜೀವ ಉಳಿಸುವಲ್ಲಿ ಸಹಾಯಕ ಎಂಬುದನ್ನು ಮರೆಯದಿರೋಣ. ಪರ್ಣಬೀಜದಿಂದ ಗಡ್ಡೆಗಳಿಂದ ಮರುಹುಟ್ಟು ಪಡೆಯಬಹುದು. ಕಲ್ಹಾರವು ಕೇವಲ ಕೆಸರಿನಲ್ಲಿ ಅರಳುವ ಹೂವಲ್ಲ: ಅದು ಅಶುದ್ಧತೆಯ ನಡುವೆಯೂ ಪರಿಶುದ್ಧತೆಯನ್ನು ಕಾಯ್ದುಕೊಳ್ಳುವ ಜೀವನದ ಸಂಕೇತ. ಚಂದ್ರನ ಬೆಳಕಿಗೆ ಸ್ಪಂದಿಸುತ್ತಾ ರಾತ್ರಿಯ ಮೌನದಲ್ಲಿ ಅರಳುವ ಈ ಪುಷ್ಪ, ನಮಗೆ ಸೌಂದರ್ಯದ ಜೊತೆಗೆ ತಾಳ್ಮೆ ಮತ್ತು ಪ್ರಶಾಂತತೆಯ ಪಾಠವನ್ನು ಕಲಿಸುತ್ತದೆ. ಪ್ರಕೃತಿಯ ಈ ಶ್ವೇತ ಸುಂದರಿಯನ್ನು ಸಂರಕ್ಷಿಸುವದು ಎಂದರೆ ನಮ್ಮ ಸಾಂಸ್ಕೃತಿಕ ಮತ್ತು ನೈಸರ್ಗಿಕ ಪರಂಪರೆಯನ್ನು ಗೌರವಿಸಿದಂತೆ. "ಪ್ರಕೃತಿಯ ಸೌಂದರ್ಯ ಕಲ್ಹಾರ. ಬಾಳಿನ ಹಾದಿಗೆ ಬೆಳಕಿನ ಹಾರ" ಜಲಸಸ್ಯಗಳನ್ನು ಮುಂದಿನ ಪೀಳಿಗೆಗೆ ಉಳಿಸುವ ಕಾರ್ಯವಾಗಲಿ.

**ಉಮಾಪತಿ ಭಟ್ಟ ಕೆ ವಿ**
ಅಧ್ಯಕ್ಷರು ಮತ್ತು ಪರಿಸರ ಕಾರ್ಯಕರ್ತರು
ಸಮಗ್ರ ವಿಕಾಸ ಟ್ರಸ್ಟ್, ಶಿರಸಿ